## ಗಮನ ಸೆಳೆಯುವ ಸೂಚನೆಗಳು

### ಕರ್ನಾಟಕ ಅರ್ಬನ್ ಫೆಡರೇಷನ್‌ನ ಕಾರ್ಮಿಕರು ಹಾಗೂ ನೌಕರ ವರ್ಗದವರಿಂದ ಸರ್ಕಾರಕ್ಕೆ ಮುಷ್ಕರದ ನೋಟೀಸ್

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮಿಲ್ಕ್ ಫೆಡರೇಶನ್ ಕಾರ್ಮಿಕರು ಹಾಗೂ ನೌಕರ ವರ್ಗದವರು, ಸರ್ಕಾರಕ್ಕೆ ಮುಷ್ಕರದ ನೋಟೀಸ್ ಕೊಟ್ಟಿರುವ ಬಗ್ಗೆ ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ,—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳ ಗಮನ ಸೆಳೆಯುವ ಸೂಚನೆಗೆ ಲಿಖಿತ ಹೇಳಿಕೆ ತಯಾರಾಗುತ್ತಾ ಇದೆ. ಇಲ್ಲಿ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಏನೆಂದರೆ, ಅವರು ಪ್ರಶ್ನೆ ಕೇಳಿದ ಪ್ರಕಾರ ಸರಕಾರಕ್ಕೆ ಇದುವರೆಗೆ ಈ ಬಗ್ಗೆ ಯಾವುದೇ ನೋಟೀಸ್ ಬಂದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಸಚಿವರಿಂದ ಉತ್ತರ ಇಷ್ಟೆಯೆ ?

ಅಧ್ಯಕ್ಷರು —ತಾವು ಗಮನ ಸೆಳೆಯುವ ಸೂಚನೆಯಲ್ಲಿ ಏನು ವಿಚಾರ ಹೇಳಿದ್ದೀರಿ ಅದಕ್ಕೆ ಸಂಬಂಧಪಟ್ಟಂತೆ ನೋಟೀಸ್ ಸರ್ಕಾರಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ—ಇವರಿಗೆ ಬಂದಿಲ್ಲವಾದರೂ ಮಿಲ್ಕ್ ಫೆಡರೇಶನ್‌ನವರಿಗೆ ಬಂದಿಲ್ಲವೇ ?

MR SPEAKER.—He is answering on behalf of the Federation.

ಶ್ರೀ ಬಿ. ಬಸವಲಿಂಗಪ್ಪ.—ತಾವು ಪ್ರಶ್ನೆ ಕೇಳಿರುವುದು ಏನೆಂದರೆ

"To call the attention of the Minister for Forest, Animal Husbandry regarding the strike notice given to the Government."

ಎಂದು, ಇವಕ್ಕೆ ಉತ್ತರವಾಗಿ ನಾನು ಹೇಳಿದ್ದು ಏನೆಂದರೆ, ಅಂಥ ಸ್ಟ್ರೈಕ್ ನೋಟೀಸ್ ನಮಗೆ ಬಂದಿಲ್ಲ ಎಂದು.

ಶ್ರೀ ಡಿ. ಬಿ. ಚಂದ್ರೇಗೌಡ.—ಲಿಖಿತ ಉತ್ತರವು ಈ ಬಗ್ಗೆ ತಯಾರಾಗುತ್ತಾ ಇದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಹಾಗಾದರೆ ಅದು ತಯಾರಾದ ಮೇಲೆ ಚರ್ಚೆ ಮಾಡೋಣ, ದಯವಿಟ್ಟು ಅದಕ್ಕೆ ಅನುಮತಿ ಕೊಡಿ.

ಅಧ್ಯಕ್ಷರು.—ಆಗಬಹುದು. ಮುಂದಿನ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ ಶ್ರೀ ವಾಟಾಳ್ ನಾಗರಾಜ್ ಮತ್ತು ಶ್ರೀ ಎಂ. ಮಹದೇವ್‌ರವರುಗಳು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಅರ್ಬನ್ ಡೆವಲಪ್‌ಮೆಂಟ್ ಮತ್ತು ಇತರೇ ಖಿ-ಳಿ ಡಿಪಾರ್ಟ್‌ಮೆಂಟ್‌ಗಳು ಇದರಲ್ಲಿ ಸೇರಿವೆ. I will find appropriate time. ಮುಂದಿನ ವಾರದಲ್ಲಿ ಇದನ್ನು ಹಾಕಿಸಿಕೊಳ್ಳೋಣ.

## ನಿಯಮ ೫೩ಳಿರ ಮೇರೆಗೆ

ಶ್ರೀ ಕೆ. ಹೆಚ್. ಹನುಮೇಗೌಡ (ಗೈರು ಹಾಜರು).—

೧. ಬೆಂಗಳೂರಿನಲ್ಲಿ ಮಕ್ಕಳಿಗೆ ಮನೋರಂಜನೆಯನ್ನು ಒದಗಿಸಲು ದೆಹಲಿ ಮತ್ತು ಬೊಂಬಾಯಿಯಲ್ಲಿ ಇರುವ ರೀತಿ ಅಮ್ಯೂಸ್‌ಮೆಂಟ್ ಪಾರ್ಕ್ ಸ್ಥಾಪಿಸಲು ಒತ್ತಾಯ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ದೆಹಲಿಯಲ್ಲಿ ಮಕ್ಕಳಿಗಾಗಿ ಮನರಂಜನೆಯನ್ನು ಒದಗಿಸಲು ಅಪ್ಪುಗರ್ ಇದೆ. ಇದೇ ರೀತಿ ಬೊಂಬಾಯಿಯಲ್ಲಿ ಎಸ್ಸೆಲ್‌ವರ್ಲ್ಡ್ ಎಂಬ ಆಧುನಿಕ ಅಮ್ಯೂಸ್‌ಮೆಂಟ್ ಪಾರ್ಕ್ ಇದೆ. ಆದರೆ ಬೆಂಗಳೂರು ಮಹಾನಗರದಲ್ಲಿ ಮಕ್ಕಳಿಗಾಗಿ ಯಾವುದೇ ರೀತಿಯ ಅಮ್ಯೂಸ್‌ಮೆಂಟ್‌ಪಾರ್ಕ್ ಇರುವುದಿಲ್ಲ. ಆದ್ದರಿಂದ ಸರ್ಕಾರದವರು ಎಸ್ಸೆಲ್‌ವರ್ಲ್ಡ್ ಮಾದರಿಯ ಒಂದು ರಿಕ್ರಿಯೇಷನ್ ಪಾರ್ಕ್‌ನ್ನು ಸರ್ಕಾರದ ವತಿಯಿಂದಾಗಲೀ ಅಥವಾ ಖಾಸಗಿ

ಯವರಿಂದಾಗಲೀ ಸ್ಥಾಪನೆ ಮಾಡಿದರೆ ಆದರಿಂದ ಬೆಂಗಳೂರು ಮಹಾನಗರದಲ್ಲಿರುವ ಮಕ್ಕಳಿಗೆ ಹಾಗೂ ಈ ನಗರಕ್ಕೆ ಬರತಕ್ಕ ಎಲ್ಲಾ ಪ್ರವಾಸಿಗಳಿಗೆ ಒಂದು ಒಳ್ಳೆಯ ರೀತಿಯ ಮನರಂಜನೆಯನ್ನು ಒದಗಿಸಲು ಸಾಧ್ಯವಾಗುತ್ತದೆ. ಸರ್ಕಾರವು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಪ್ರಾರ್ಥಿಸುತ್ತೇನೆ.

SRI K. H. RANGANATH.—Government will take note of it.

೨. ಭರಮ ಸಾಗರ ಕ್ಷೇತ್ರದಲ್ಲಿ ರಾಷ್ಟ್ರೀಕರಣದ ನಂತರ ಸರ್ಕಾರಿ ಬಸ್ಸುಗಳ ಅಭಾವದಿಂದ ಜನರಿಗೆ ತೊಂದರೆಯಾಗಿರುವುದು.

ಶ್ರೀ ಕೆ. ಶಿವಮೂರ್ತಿ (ಭರಮ ಸಾಗರ).—ಮಾನ್ಯ ಅಧ್ಯಕ್ಷರೇ, ಭರಮಸಾಗರ ಕ್ಷೇತ್ರದಲ್ಲಿ ಇರುವ ಮ್ಯಾಗಳ ಹಳ್ಳಿ, ಕೆರೆಮಾಗಳಹಳ್ಳಿ, ಅಜ್ಜಪ್ಪನಹಳ್ಳಿ, ಕಾಕಬಾಳು, ಬುಚ್ಚಜೋರನಹಳ್ಳಿ, ಈ ಹಳ್ಳಿಗಳಿಗೆ ಹೋಗುವ ಸರ್ಕಾರಿ ಬಸ್ಸುಗಳ ಓಡಾಟವನ್ನು ರದ್ದುಪಡಿಸಿದ್ದಾರೆ. ಪ್ರಯುಕ್ತ ನನ್ನ ಕ್ಷೇತ್ರದ ಜನತೆಗೆ ಬಹಳ ತೊಂದರೆಯಾಗಿದೆ. ರಾಷ್ಟ್ರೀಕರಣದ ನಂತರ ಜಿಲ್ಲೆಯಲ್ಲಿ ಸರ್ಕಾರದ ಬಸ್ಸುಗಳ ಅಭಾವದಿಂದ ನನ್ನ ಕ್ಷೇತ್ರದಲ್ಲಿರುವ ಹಲವಾರು ಹಳ್ಳಿಗಳಲ್ಲಿ ರಸ್ತಾರೋಕೋ, ಧರಣಿ, ಸತ್ಯಾಗ್ರಹ ನಡೆಯುತ್ತಿರುವ ಬಗ್ಗೆ ಪ್ರಸ್ತಾಪಿಸಲು ಅನುಮತಿ ಕೋರುತ್ತೇನೆ.

SRI S. M. YAHYA.—Government will take note of it.

ಶ್ರೀ ಕೆ. ಶಿವಮೂರ್ತಿ.—ನಾನು ೩೫ ಪ್ರಶ್ನೆಗೆ ಉತ್ತರ ಕೇಳುಹಿಸಿದರೆ ಮಾನ್ಯ ಸಚಿವರು ಹೇಳುವ ಉತ್ತರ ಹೀಗಿದ್ದರೆ ಹೇಗೆ ? ನಾನು ಈ ಬಗ್ಗೆ ಮಾನ್ಯ ಸಚಿವರಿಗೆ ಪತ್ರಗಳನ್ನು ಬರೆದಿದ್ದೇನೆ. ಸಚಿವರ ಹತ್ತಿರ ಈ ಕುರಿತು ಮಾತನಾಡಿದ್ದೇನೆ. ಆದರೂ ಕೂಡ ನಮ್ಮ ಸಮಸ್ಯೆ ಪರಿಹಾರವಾಗಿಲ್ಲ. ನಮ್ಮ ಕ್ಷೇತ್ರದ ಯಾವುದೇ ಕೆಲಸಕಾರ್ಯಗಳನ್ನು ಈ ಸದನದಲ್ಲಿ ತಮ್ಮ ರಕ್ಷಣೆಯಿಂದ ಮಾಡಿಕೊಳ್ಳಬಹುದು ಎಂದು ನಾನು ನಂಬಿದ್ದೇನೆ. ಇಂದು ೩೨ ಹಳ್ಳಿಗಳಲ್ಲಿ ಧರಣಿ ಸತ್ಯಾಗ್ರಹ ನಡೆಯುತ್ತಾ ಇದೆ ನ್ಯಾಷನಲ್ ಹೈವೇಯನ್ನು ಬ್ಲಾಕ್ ಮಾಡಿದ್ದಾರೆ. ಇಂಥ ಸಂದರ್ಭದಲ್ಲಿ ಸರಿಯಾದ ಉತ್ತರವನ್ನು ಹೇಳುವ ಬದಲು ಸರಕಾರದವರು ನೋಟ್ ಮಾಡಿಕೊಳ್ಳುತ್ತಾರೆ ಎಂದು ಹೇಳಿದರೆ ಏನು ಅರ್ಥ ?

MR. SPEAKER.—The Hon. Minister has said 'We will take note of it.' Government should take serious note of it.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಮಂತ್ರಿಗಳು ಸೀರಿಯಸ್‌ಲೀ ನೋಟ್ ಮಾಡಿಕೊಳ್ಳುತ್ತಾರೆ ಅಂದರೆ ಹೇಗೆ ? ಈಗ ತಾವುಗಳು ನಮ್ಮ ರಕ್ಷಣೆಗೆ ಬರಬೇಕು. ಅಲ್ಲಿ ಜನರು ಧರಣಿ ಮಾಡುತ್ತಾ ಇದ್ದಾರೆ.....

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಸಾರಿಗೆ ಸಚಿವರು ಈ ಸದನದಲ್ಲಿ ಈಗ ಇಲ್ಲ. ಅವರು ಮೇಲ್ಮನೆಗೆ ಹೋಗಿದ್ದಾರೆ. ಅವರ ಇಲಾಖೆಯ ಕುರಿತು ನಾನು ಎಲ್ಲವನ್ನೂ ಹೇಳಲಿಕ್ಕೆ ಸಾಧ್ಯವೇ ? ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ we will very seriously take note of it.

ಶ್ರೀ ಕೆ. ಶಿವಮೂರ್ತಿ.—ನಾನು ಈ ಬಗ್ಗೆ ಮಾನ್ಯ ಸಚಿವರ ಹಶ್ತಿರವೂ ಮಾತನಾಡಿದ್ದೇನೆ. ಸಾರಿಗೆ ಸಂಸ್ಥೆಯವರೊಂದಿಗೂ ಮಾತನಾಡಿದ್ದೇನೆ. ಸುಮಾರು ೨೦ ಪತ್ರಗಳನ್ನು ಬರೆದಿದ್ದೇನೆ.

ಅಧ್ಯಕ್ಷರು.—ನಾನು ತಮಗೆ ಕೊಡುವ ಭರವಸೆ ಎಂದರೆ ೩೫ರ ಅಧಿನಿಯಮದ ಮೇರೆಗೆ ತವಗೆ ವಿಚಾರವನ್ನು ಸರಕಾರದ ಗಮನಕ್ಕೆ ತರುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ಅಷ್ಟೆ ನನ್ನ ಇತಿಮಿತಿ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಹೇಳಿದ ವಿಚಾರಗಳನ್ನು ಮಾನ್ಯ ಸಾರಿಗೆ ಸಚಿವರ ಗಮನಕ್ಕೆ ತಂದು ಬಹಳಮಟ್ಟಿಗೆ ಪರಿಹಾರವನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ಕೆ. ಶಿವಮೂರ್ತಿ.—ಅಲ್ಲಿ ಧರಣಿ, ರಸ್ತಾರೋಕೋ, ಸತ್ಯಾಗ್ರಹ ಎಲ್ಲವೂ ನಡೆಯುತ್ತಾ ಇದೆ. ನಾಳೆ ಅಲ್ಲಿ ಏನಾದರೂ ಲಾಟಿಚಾರ್ಜ್, ಫೈರಿಂಗ್ ಆದರೆ, ಏನಾದರೂ ಅನಾಹುತವಾದರೆ ಕ್ಷೇತ್ರದ ಶಾಸಕನಾದ ನನ್ನ ಮೇಲೆ ಹೊಣೆ ಬರುತ್ತದೆ. ಅಲ್ಲಿ ಉದ್ಘಾಟನೆ ಮಾಡಿದ ಬಸ್‌ಗಳನ್ನು ಈಗ ರದ್ದು ಮಾಡಿದ್ದಾರೆ. ೩೨ ಹಳ್ಳಿಗಳಿಗೆ ಬಸ್‌ನ ಸೌಲಭ್ಯ ಇಲ್ಲವಾಗಿದೆ.

ಅಧ್ಯಕ್ಷರು.—ಯಾರು ಉದ್ಘಾಟನೆ ಮಾಡಿದವರು ?